ಇ) ಮೇಲ್ವಿಚಾರಕ ನೇಮಕಾತಿಗೆ ಸಂಬಂಧಿಸಿದಂತೆ ಸ್ಥಳೀಯ ಜನಪ್ರತಿನಿಧಿಗಳಿಗೆ ಮಾನ್ಯತೆ ಇಲ್ಲವೆ

ಈ) ಇದಕ್ಕೆ ಸರ್ಕಾರದ ಕ್ರಮವೇನು?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ಸಂಬಂಧಿಸಿದ ಸ್ಥಳದ ಅಗತ್ಯತೆಯನ್ನು ಪರಿಗಣಿಸಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಮಂಜೂರು ಮಾಡಲಾಗುತ್ತಿದೆ

ಆ) ನಿಗದಿತ ಮಾರ್ಗಸೂಚಿ ಪ್ರಕಾರ ಗ್ರಂಥಾಲಯ ಇಲಾಖೆಯು ಮೇಲ್ವಿಚಾರಕರ ನೇಮಕಾತಿಯನ್ನು ಮಾಡುತ್ತಿದೆ

ಇ) ಮಾರ್ಗಸೂಚಿಗಳಲ್ಲಿ ಈ ಅಂಶವು ಒಳಗೊಂಡಿಲ್ಲ

ಈ) ಉದ್ಭವಿಸುವುದಿಲ್ಲ

ಶಿವಮೊಗ್ಗ ವಿಧಾನ ಸಭೆ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಕಟ್ಟಡಗಳ ನಿರ್ಮಾಣ ಹಾಗೂ ದುರಸ್ತಿ

130 (217) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 3ವರ್ಷದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಕಟ್ಟಡಗಳ ದುರಸ್ತಿಗೆ ಇಲಾಖೆಯಿಂದ ಬಿಡುಗಡೆ ಮಾಡಲಾದ ಮೊತ್ತವೆಷ್ಟು

ಆ) ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕಟ್ಟಡಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ನೂತನ ಕೊಠಡಿಗಳ ನಿರ್ಮಾಣಕ್ಕೆ ಅನುದಾನ ಮಂಜೂರಾಗಿದೆಯೇ (ವಿವರ ನೀಡುವುದು)?

ಪ್ರೋ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ಸಾಲಿನಲ್ಲಿ (2000–01, 2001–02 ಮತ್ತು 2002–03) ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕಟ್ಟಡ ದುರಸ್ತಿಗೆ ಇಲಾಖೆಯಿಂದ ಬಿಡುಗಡೆ ಮಾಡಲಾದ ಅನುದಾನದ ವಿವರಗಳು ಈ ರೀತಿ ಇದೆ (ರೂ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕಾರ್ಯಕ್ರಮದ ವಿವರ	ಸರ್ಕಾರಿ ಪ್ರಾಥಮಿಕ ಶಾಲೆಗಳು			ಸರ್ಕಾರಿ ಪ್ರೌಢ ಶಾಲೆಗಳು		
		2000–01	2001–02	2002–03	2000–01	2001–02	2002–03
01	ರಾಜ್ಯವಲಯ ಯೋಜನೆಯಡಿ ದುರಸ್ತಿಗಾಗಿ	0 63	0 75	0	0 65	0	0
02	ರಾಜ್ಯವಲಯ ಯೋಜನೆಯಡಿ ಕುಡಿಯುವ ನೀರಿಗಾಗಿ	0 50	1 00	0	0 50	0	0
03	ಯೋಜನೇತರ	0 40	0 35	0 80	0	0	0 21

1	2	3	4	5	6	7	8
04	ಪ್ರಧಾನಮಂತ್ರಿಗೆ ಗ್ರಾಮೋದಯ ಯೋಜನೆ	0	0	0 62	0	0	0
	ಒಟ್ಟು	1 53	2 10	1 42	1 15	0	0 21

ಅ) ಬಂದಿದೆ

ಇ) ಮಾಡಲಾಗಿದೆ

ಕ್ರಮ ಸಂಖ್ಯೆ	ಕಾರ್ಯಕ್ರಮದ ವಿವರ	ಸರ್ಕಾರಿ ಪ್ರಾಥಮಿಕ ಶಾಲೆಗಳು			ಸರ್ಕಾರಿ ಪ್ರೌಢ ಶಾಲೆಗಳು		
		2000–01	2001–02	2002–03	2000–01	2001–02	2002–03
01	ರಾಜ್ಯವಲಯ ಯೋಜನೆ ಕೊರಡಿ ನಿರ್ಮಾಣ	0 00	3 00	0 00	0 00	10 00	4 00
02	ನಗರ ಪ್ರದೇಶದ ಕೊರಡಿಗಳು	4 10	1 50	0 00	–	–	–
03	ಆರ್ ಐ ಡಿ ಎಫ್ ಅಡಿ	0 00	–	1 50	–	–	–
	ಒಟ್ಟು	4 10	4 50	1 50	0 00	10 00	4 00

ಶಿವಮೊಗ್ಗ ವಿಧಾನಸಭಾ ಕ್ಷೇತ್ರ

131 (218) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗಾಜನೂರು ಗ್ರಾಮದಲ್ಲಿ ನೂತನ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ವಿವರ ನೀಡುವುದು

ಆ) ಶಿವಮೊಗ್ಗ ನಗರದ ಸರ್ಕಾರಿ ಮೆಗ್ಗಾನ್ ಆಸ್ಪತ್ರೆ ಆಧುನೀಕರಣ ಅಭಿವೃದ್ಧಿ ಕಾಮಗಾರಿಗೆ ವ್ಯಯಿಸಲಾದ ಮೊತ್ತ ಎಷ್ಟು ಹೊಸದಾಗಿ ಪ್ರಾರಂಭಿಸಲಾಗುವ ಆರೋಗ್ಯ ವಿಭಾಗಗಳ ವಿವರ ನೀಡುವುದು ಎಲ್ಲಾ ವಿಭಾಗಗಳಲ್ಲಿ ನುರಿತ ಹಾಗೂ ವಿಶೇಷ ತಜ್ಞ ವೈದ್ಯರ ನೇಮಕಾತಿ ಮಾಡಲಾಗಿದೆಯೇ?

ಇ) ಮೆಗ್ಗಾನ್ ಆಸ್ಪತ್ರೆಯಲ್ಲಿ ಗ್ಲೂಕೋಸ್ ತಯಾರಿಕಾ ಘಟಕ ಪುನರ್ ಪ್ರಾರಂಭಿಸುವ ಯೋಜನೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು ಮಾರ್ಗಸೂಚಿ ಪ್ರಕಾರ ಪರಿಶೀಲಿಸಲಾಗುತ್ತಿದೆ

ಆ) ಕೆ ಹೆಚ್ ಎಸ್ ಡಿ ಪಿ ವತಿಯಿಂದ 799 389 ಲಕ್ಷ ರೂಗಳನ್ನು ಕಾಮಗಾರಿಗೆ ವ್ಯಯಿಸಲಾಗಿದೆ ಆಸ್ಪತ್ರೆಯಲ್ಲಿ ಹೊಸದಾಗಿ ಪ್ರಾರಂಭಿಸುವ ವಿಭಾಗಗಳ ವಿವರ

1) ಐ ಸಿ ಯು ಘಟಕ

2) ಡಯಾಲಿಸಿಸ್ ಘಟಕ

ವಿಶೇಷ ತಜ್ಞರು ಈ ಕೆಳಕಂಡಂತೆ ತುಂಬಬೇಕಾಗಿದೆ